ಕರ್ನಾಟಕ ಸರ್ಕಾರ

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## **2019-20ನೇ ಸಾಲಿನ ವಾರ್ಷಿಕ ವರದಿ**

## **ಹಾಗೂ**

## **2020-21 ರ ನಿರ್ವಹಣಾ ಮುಂಗಡಪತ್ರ**

**2ನೇ ಗೇಟ್, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀಧಿ,**

**ಬೆಂಗಳೂರು-560 001**

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## 2019-20ನೇ ಸಾಲಿನ ವಾರ್ಷಿಕ ವರದಿ

## ಹಾಗೂ

## 2020-21 ರ ನಿರ್ವಹಣಾ ಮುಂಗಡ ಪತ್ರ

**2ನೇ ಗೇಟ್, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀಧಿ,**

**ಬೆಂಗಳೂರು-560 001**

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## 2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ರ ನಿರ್ವಹಣಾ ಮುಂಗಡ ಪತ್ರ

## ವಿಷಯ ಸೂಚಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1 | ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಪರಿಚಯ | **1-7** |
| 2 | ಸಾರ್ವಜನಿಕ ಉದ್ದಿಮೆಗಳ ಇಲಾಖೆಯ **2019-20**ನೇ ಆಯವ್ಯಯ ಪಕ್ಷಿನೋಟ ಹಾಗೂ ವೆಚ್ಚಗಳ ವಿವರ | **8-19** |
| 3 | **2020-21**ರ ನಿರ್ವಹಣಾ ಮುಂಗಡ ಪತ್ರ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ **2020-21**ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ವಿವರ | **20-22** |

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## 2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ರ ನಿರ್ವಹಣಾ ಮುಂಗಡ ಪತ್ರ

## ಇಲಾಖಾ ಮುಖ್ಯಸ್ಥರ ವಿವರ

| ಕ್ರ.ಸಂ. | ಹುದ್ದೆ | ಹೆಸರು | ಇಂದ | ವರೆಗೆ |
|---|---|---|---|---|
| 1 | ಸಾರ್ವಜನಿಕ ಉದ್ದಿಮೆಗಳ ಸಚಿವರು | ಶ್ರೀ ಜಗದೀಶ್ ಶೆಟ್ಟರ್ | 20-08-2019 | |
| 2 | ಸರ್ಕಾರದ ಕಾರ್ಯದರ್ಶಿ | ಶ್ರೀಮತಿ ವಿ ರಶ್ಮಿ ಮಹೇಶ್, ಭಾ.ಆ.ಸೇ., | 18-01-2020 | |

# ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಪರಿಚಯ

## 2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಸರ್ಕಾರದ  ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುತ್ತಾರೆ. ಸಾರ್ವಜನಿಕ ಉದ್ದಿಮೆಗಳ ಅಧ್ಯಯನ ನಡೆಸುವುದು, ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ನಿರಂತರವಾಗಿ ತರಬೇತಿ ನೀಡುವ ಕಾರ್ಯಕ್ರಮಗಳನ್ನು ನಡೆಸುವುದು, ಅಲ್ಲದೇ ಉತ್ತಮ ಕಾರ್ಯಚಟುವಟಿಕೆಗಳನ್ನು ರೂಢಿಸಿಕೊಳ್ಳುವ ಹಾಗೂ ಪ್ರಸ್ತುತ ಮಾರುಕಟ್ಟೆಯಲ್ಲಿರುವ ಪೈಪೋಟಿಯನ್ನು ಸಮರ್ಪಕವಾಗಿ ನಿರ್ವಹಿಸಲು ಮಾನ್ಯ ಮುಖ್ಯಮಂತ್ರಿಯವರ 'ವಾರ್ಷಿಕ ರತ್ನ' ಪ್ರಶಸ್ತಿಯನ್ನು ನೀಡಲಾಗುತ್ತದೆ.

**ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ವಿಷಯಗಳಲ್ಲಿ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ವಹಿಸಲಾಗಿದೆ.**

1. ಕರ್ನಾಟಕ ಸರ್ಕಾರದ (ವ್ಯವಹಾರ ಹಂಚಿಕೆ) ನಿಯಮಗಳು 1977ರ ಹಾಗೂ ಅದರ ತಿದ್ದುಪಡಿಗಳ ಅಡಿಯಲ್ಲಿನ ಅನುಸೂಚಿ II ರ ನಿಯಮ "ಪಿ" ಯಲ್ಲಿ ಸೂಚಿಸಿರುವ ಎಲ್ಲಾ ವಿಷಯಗಳು.
2. ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ನಿಯಮ 72 ಬಿ ಪ್ರಕಾರ ಎಲ್ಲಾ ಆಡಳಿತಾತ್ಮಕ ಇಲಾಖೆಗಳು ಈ ಕೆಳಗೆ ನಮೂದಿಸಿರುವ ಯಾವುದೇ ಪ್ರಸ್ತಾವನೆಗಳ ಬಗ್ಗೆ ಸಚಿವ ಸಂಪುಟದ ಅನುಮೋದನೆ ಪಡೆಯುವ ಅಥವಾ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುನ್ನ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಮಾಲೋಚಿಸತಕ್ಕದ್ದು.
   - i) ಕರ್ನಾಟಕ ಸರ್ಕಾರದ ಪೂರ್ಣಸ್ವಾಮ್ಯದಲ್ಲಿ ಅಥವಾ ಅಂಶಿಕವಾಗಿ ಆರ್ಥಿಕ ನೆರವಿನಿಂದ ಅಥವಾ ಸಾರ್ವಜನಿಕ ವಲಯದಲ್ಲಿ ಹೊಸ ನಿಗಮ ಅಥವಾ ಕಂಪನಿಗಳ ಸೃಜನೆ.
   - ii) ಕರ್ನಾಟಕ ಸರ್ಕಾರ ಅಥವಾ ಸಾರ್ವಜನಿಕ ಉದ್ದಿಮೆಯು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮಗಳನ್ನು ಹೊರತುಪಡಿಸಿ, ಹೊಸ ಅಥವಾ ಈಗ ಅಸ್ತಿತ್ವದಲ್ಲಿರುವ ನಿಗಮ ಅಥವಾ ಕಂಪನಿಗೆ ಷೇರು ಬಂಡವಾಳ ತೊಡಗಿಸುವುದರಲ್ಲಿನ ಸಹಭಾಗಿತ್ವದ ಪ್ರಸಂಗಗಳು.
   - iii) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮವು ಹೊಸ ಅಥವಾ ಈಗ ಅಸ್ತಿತ್ವದಲ್ಲಿರುವ ನಿಗಮ ಅಥವಾ ಕಂಪನಿಗಳಲ್ಲಿ ರೂ. 50 ಲಕ್ಷಕ್ಕೂ ಮೀರಿ ಬಂಡವಾಳ ಹೂಡುವ ಪ್ರಸಂಗಗಳು.
   - iv) ಸಾರ್ವಜನಿಕ ಉದ್ದಿಮೆಗಳ ಮುಚ್ಚುವಿಕೆ, ವಿಲೀನಗೊಳಿಸುವಿಕೆ ಅಥವಾ ವಿನ್ಯಾಸದಲ್ಲಿನ ಪುನರ್ ಸಂಘಟನೆಯಂಥ ಇತರೆ ಪ್ರಮುಖ ಯೋಜನೆಗಳ ಪ್ರಸಂಗಗಳು.

3. ರಾಜ್ಯ ಸ್ವಾಮ್ಯದ ಸಾರ್ವಜನಿಕ ನಿಗಮ, ಕಂಪನಿಗಳು, ಉದ್ದಿಮೆಗಳ ಮತ್ತು ಯೋಜನೆಗಳಲ್ಲಿ ಬಂಡವಾಳ ವೆಚ್ಚ ಅಂದಾಜುಗಳು ಶೇಕಡ 20ಕ್ಕೂ ಹೆಚ್ಚು ಅಥವಾ ರೂ. 25 ಲಕ್ಷಕ್ಕೂ ಕಡಿಮೆ (ಇದರಲ್ಲಿ ಯಾವುದು ಕಡಿಮೆಯೋ ಅದು) ಇದ್ದರೆ ಅಂತಹ ಕಡೆ ಬಂಡವಾಳ ವೆಚ್ಚ ಅಂದಾಜುಗಳನ್ನು ಹೆಚ್ಚಿಸುವ ಪ್ರಸಂಗಗಳು.

i) ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಸರ್ಕಾರದ ಒಂದು ಅಂಗವಾಗಿ ಕಾರ್ಯನಿರ್ವಹಿಸುತ್ತಾ, ಸಾರ್ವಜನಿಕ ಉದ್ದಿಮೆಗಳ ಸಮನ್ವಯ ಹಾಗೂ ಉಸ್ತುವಾರಿ ಪ್ರಾಧಿಕಾರವಾಗಿ ಕೆಲಸ ನಿರ್ವಹಿಸುತ್ತಾ, ಸಾರ್ವಜನಿಕ ಉದ್ದಿಮೆಗಳಿಗೆ ಮಾರ್ಗದರ್ಶಕವಾಗಿ ಕೆಲಸ ಮಾಡತಕ್ಕದ್ದು. ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಕಾರ್ಯದರ್ಶಿ ಅಥವಾ ಅವರಿಂದ ನಾಮನಿರ್ದೇಶಿಸಲ್ಪಟ್ಟಿದ್ದ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅಧಿಕಾರಿಯು ಪ್ರತಿ ಸಾರ್ವಜನಿಕ ಉದ್ದಿಮೆಯ ನಿರ್ದೇಶಕರ ಮಂಡಳಿಗೆ ನಿರ್ದೇಶಕರಾಗಿ ನೇಮಿಸಲ್ಪಡುತ್ತಾರೆ. ಈ ಅಂಶಕ್ಕೆ ಉಪಬಂಧವೇನೆಂದರೆ ನಾಮನಿರ್ದೇಶಿಸಲ್ಪಟ್ಟ ಯಾವ ವ್ಯಕ್ತಿಯು (ನಿರ್ದಿಷ್ಟವಾಗಿ ಉಲ್ಲೇಖಿಸದಿದ್ದಲ್ಲಿ) 10 ಕಂಪನಿಗಳಿಗಿಂತ ಹೆಚ್ಚಿನ ನಿರ್ದೇಶಕರ ಮಂಡಳಿಯಲ್ಲಿ ಸದಸ್ಯರಾಗಿ ಇರತಕ್ಕದ್ದಲ್ಲ.

ii) ಸರ್ಕಾರದ ಅನುಮೋದನೆ ಪಡೆದು ಉದ್ದಿಮೆಗಳಲ್ಲಿ ಖಾಸಗೀಕರಣ, ಪುನರ್ರಚನೆ ಮತ್ತು ಬಂಡವಾಳ ಹಿಂತೆಗೆದುಕೊಳ್ಳುವ ಕುರಿತಂತೆ ಸಾಮಾನ್ಯ ನೀತಿಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು.

iii) ಸರ್ಕಾರದ ಅನುಮೋದನೆ ಪಡೆದು ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಹಣಕಾಸು ನಿರ್ವಹಣೆ, ವೇತನ ಒಪ್ಪಂದ, ಮಾನವ ಸಂಪನ್ಮೂಲ ಅಭಿವೃದ್ಧಿ ಮುಂತಾದ ವಿಷಯಗಳಲ್ಲಿ ನೀತಿಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು.

iv) ಉನ್ನತ ಮಟ್ಟದ ಸಮಿತಿಯ ಪಾತ್ರದ ಕಾರ್ಯನಿರ್ವಹಣೆ, ಟಾಸ್ಕ್‌ಫೋರ್ಸ್, ಎಂ.ಓ.ಯುಗಳ ಅನುಷ್ಠಾನ, ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದರ ಜೊತೆಗೆ ಸಾರ್ವಜನಿಕ ಉದ್ದಿಮೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ನಡುವಿನ ಎಂ.ಓ.ಯುಗಳನ್ನು ಕಾರ್ಯರೂಪಕ್ಕೆ ತರುವುದು.

v) ಸಾರ್ವಜನಿಕ ಉದ್ದಿಮೆ ಮಂಡಳಿಗಳ ಸಭೆಗಳ ನಡವಳಿಕೆಗಳನ್ನು ಕ್ರಮವಾಗಿ ಪುನರಾವಲೋಕಿಸುವುದು ಮತ್ತು ಕಾರ್ಯಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು.

vi) ಪ್ರತಿ ವರ್ಷ ಆಯ್ದ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡುವುದು.

vii) ಸಾರ್ವಜನಿಕ ಉದ್ದಿಮೆಗಳ: ಆಡಳಿತಾತ್ಮಕ ಇಲಾಖೆಗಳು ಮತ್ತಿತರೆ ಶಾಸನ ಸಮಿತಿಗಳು, ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಇಲಾಖೆ, ಭಾರತ ಸರ್ಕಾರದ ಇಲಾಖೆಗಳು ಮತ್ತು ಇತರೆ ರಾಜ್ಯಗಳ ಎಸ್.ಸಿ.ಓ.ಪಿ.ಇ., ಯಂತಹ ಮಂಡಳಿಗಳ ನಡುವೆ ಮಧ್ಯವಾಹಿ(ಇಂಟರ್‌ಫೇಸ್)ಯಾಗಿ ಕಾರ್ಯ ನಿರ್ವಹಿಸುವುದು.

viii) ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಮಾಲೋಚಿಸತಕ್ಕದ್ದು

· ನಿರ್ದೇಶಕ ಮಂಡಳಿಯ ಸಭಾ ನಡವಳಿಗಳನ್ನು ಒದಗಿಸುವ ಬಗ್ಗೆ ಹಾಗೂ ಸಂಸ್ಥೆಯ ಜ್ಞಾಪನ ಪತ್ರ ಮತ್ತು ನಿಯಮಾವಳಿಗಳ ತಿದ್ದುಪಡಿ.

· ನಿರ್ದೇಶಕ ಮಂಡಳಿಯ ಸಂಯೋಜನೆ.

· ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸಂಭಾವನೆ/ಗೌರವಧನ ಹಾಗೂ ವಿಶೇಷ ಸೌಲಭ್ಯಗಳನ್ನು ಪರಿಷ್ಕರಿಸುವ ಬಗ್ಗೆ

· ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಮತ್ತು ಪುನರಾವಲೋಕಿಸುವ ಕುರಿತು ಮಾರ್ಗಸೂಚಿಗಳು

· ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ತಿದ್ದುಪಡಿ

· ಹೊಸ ಹುದ್ದೆಗಳ ಸೃಜನೆ ಬಗ್ಗೆ ಅನುಮತಿ

· ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ: ಬಂಡವಾಳ ಹಿಂತೆಗೆದುಕೊಳ್ಳುವುದು: ಪುನರ್ ಸಂಘಟನೆ: ಮರುವಸತಿ.

· ಬೋನಸ್: ಗ್ರಾಚ್ಯುಟಿಯ ವಿತರಣೆ

· ವೇತನ ಪರಿಷ್ಕರಣೆ

· ಕನಿಷ್ಟ ವೇತನ ರೂ. 4,700-00 ಕ್ಕಿಂತ ಹೆಚ್ಚಾಗಿರುವ ಹುದ್ದೆಗಳ ರಚನೆ(ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 538 ಸಅಸೇ2007, ದಿನಾಂಕ; 13.03.2008ರನ್ವಯ).

· ಗುತ್ತಿಗೆ ಆಧಾರದ ಮೇಲಿನ ನೇಮಕಾತಿ.

· ಮಂಡಳಿಗಳ ನಿರ್ದೇಶಕರುಗಳ ಹಾಜರಿ ಶುಲ್ಕವನ್ನು (ಸಿಟ್ಟಿಂಗ್ ಫೀ) ನಿರ್ಧರಿಸುವುದು.

· ಉದ್ಯೋಗಿಗಳು, ಇತರ ಸಿಬ್ಬಂದಿಗಳು, ನಿರ್ದೇಶಕರುಗಳು, ಮುಖ್ಯಾಧಿಕಾರಿಗಳಿಗೆ ಸಂಬಂಧಿಸಿದ ಹೆಚ್ಚುವರಿ ಸಂಭಾವನೆ ಹಾಗೂ ಯಾವುದೇ ಹೊಸ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸೂಚನೆಗಳನ್ನು ಹೊರಡಿಸುವುದು.

· ಸಾರ್ವಜನಿಕ ಉದ್ದಿಮೆಗಳ ಎಲ್ಲಾ ದರ್ಜೆಯ ಸಿಬ್ಬಂದಿಗಳ ವಿದೇಶ ಪ್ರವಾಸದ ಪ್ರಸ್ತಾವನೆಗಳು.

ix) ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಡಾಟಾ-ಬ್ಯಾಂಕ್‌ನಂತೆ ಕೆಲಸ ನಿರ್ವಹಿಸಿ ಕಾರ್ಯನಿರ್ವಾಹಕ ಅಧಿಕಾರಿಗಳ ಹುದ್ದೆಗಳಿಗೆ ಅಭ್ಯರ್ಥಿಗಳ ಪಟ್ಟಿ ತಯಾರಿಸುವುದು ಮತ್ತು ಸಾರ್ವಜನಿಕ ಉದ್ದಿಮೆಗಳ ಆಯ್ಕೆ ಮಂಡಳಿಗೆ ಬೇಕಾದ ಕಾರ್ಯ ನಿರ್ವಾಹಕ ಹುದ್ದೆಗಳ ಬಗ್ಗೆ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಸೂಚಿಸುವುದು.

x) ಸಾರ್ವಜನಿಕ ಉದ್ದಿಮೆಗಳ ಕಾರ್ಯಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಸಮೀಕ್ಷಾ ವರದಿಗಳನ್ನು ತಯಾರಿಸಿ ರಾಜ್ಯ ವಿಧಾನ ಸಭೆಯಲ್ಲಿ ಮಂಡಿಸುವುದು.

xi) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಯೋಜನಾ ಇಲಾಖೆಗಳು ಸರ್ಕಾರದ ಎಲ್ಲಾ ಇಲಾಖೆಗಳಿಗೆ ಕುರಿತು ಪಾತ್ರ ವಹಿಸುವಂತೆ, ಸಾರ್ವಜನಿಕ ಉದ್ದಿಮೆಗಳಿಗೆ ಸಚಿವಾಲಯವಾಗಿ ಕಾರ್ಯನಿರ್ವಹಿಸುವುದು.

xii) ಸಾರ್ವಜನಿಕ ಉದ್ದಿಮೆಗಳ ಸಿಬ್ಬಂದಿಗಳಿಗೆ ನಿರಂತರವಾಗಿ ತರಬೇತಿ ಕೋರ್ಸ್‌ಗಳನ್ನು ನಡೆಸುವುದು.

xiii) ಸರ್ಕಾರವು ಆಗಿಂದಾಗ್ಗೆ ವಹಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

4. ಸಾರ್ವಜನಿಕ ಉದ್ದಿಮೆಗಳು ತಮ್ಮ ಪ್ರಸ್ತಾವನೆಗಳನ್ನು ಸಂಬಂಧಿಸಿದ ಆಡಳಿತ ಇಲಾಖೆಗಳ ಮೂಲಕವೇ ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಕಳುಹಿಸಬೇಕು. ಆನಂತರ ಆಡಳಿತ ಇಲಾಖೆಗಳು ಪ್ರಸ್ತಾವನೆಗಳನ್ನು ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಯವರ ಅನುಮೋದನೆಯೊಂದಿಗೆ ತಮ್ಮ ಸಲಹೆ ಮತ್ತು ಅಭಿಪ್ರಾಯಗಳೊಂದಿಗೆ ಕರ್ನಾಟಕ ರಾಜ್ಯ ಉದ್ದಿಮೆಗಳ ಮಹೋದ್ಯಮಕ್ಕೆ ಕಳುಹಿಸತಕ್ಕದ್ದು.

5. ಕರ್ನಾಟಕ ಸರ್ಕಾರದ (ವ್ಯವಹಾರ ಹಂಚಿಕೆ) ನಿಯಮಗಳು, 1977 ರ ಅನುಸೂಚಿ –IIರ ಹಾಗೂ ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 72 ಬಿ, ಮೊದಲ ಅನುಸೂಚಿಯ ಕ್ರಮಸಂಖ್ಯೆ 16 ರಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 538 ಸಅಸೇ 2007, ದಿನಾಂಕ 13.03.2008 ರಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಮಾಲೋಚಿಸುವ ಕುರಿತ ವಿಷಯಗಳನ್ನು ನಿರ್ದಿಷ್ಟಪಡಿಸಲಾಗಿದೆ.

6. ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಆಧ್ಯಾದೇಶವಾದ ಜವಾಬ್ದಾರಿಗಳಲ್ಲಿ (Mandated Responsibilities) ಕಂಪನಿ/ನಿಗಮಗಳ ವೃಂದ ಮತ್ತು ನೇಮಕಾತಿ ನಿಯಮಗಳು, ಸರ್ಕಾರಕ್ಕೆ ಲಾಭಾಂಶವನ್ನು (ಡಿವಿಡೆಂಡ್) ಪಾವತಿಸುವ ಬಗ್ಗೆ, ನಿರ್ದೇಶಕರ ಮಂಡಳಿಯ ಸಭಾ ನಡವಳಿಗಳನ್ನು ಕಳುಹಿಸಿಕೊಡುವ ಬಗ್ಗೆ, ಜ್ಞಾಪನ ಪತ್ರ ಮತ್ತು ನಿಯಮಾವಳಿಗಳ ತಿದ್ದುಪಡಿ (ಮೆಮೊರಂಡಮ್ ಆಫ್ ಅಸೋಷಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್), ನಿರ್ದೇಶಕರ ಮಂಡಳಿಯ ಸಂಯೋಜನೆ, ಬೋನಸ್/ಅನುಗ್ರಹಪೂರ್ವಕ ಕೊಡುಗೆ(Exgratia), ವೇತನ ಪರಿಷ್ಕರಣೆ, ಗುತ್ತಿಗೆ ಆಧಾರದ ನೇಮಕಾತಿ ಇತ್ಯಾದಿ ವಿಷಯಗಳ ಬಗ್ಗೆ ಕಡ್ಡಾಯವಾಗಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಮಾಲೋಚಿಸುವುದು.

7. ಮೇಲಿನ ನಿಯಮಗಳು ಹಾಗೂ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನು ಕುರಿತ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಸಲ್ಲಿಸುವುದು.

8. ಕರ್ನಾಟಕ ಸರ್ಕಾರ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 60 ನಿಗಮಗಳಲ್ಲಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತ ಅಧಿಕಾರೇತರ ನಿರ್ದೇಶಕರುಗಳಿಗೆ ಪ್ರತಿ ಮಂಡಳಿ ಸಭೆ ಮತ್ತು ಉಪ ಸಮಿತಿ ಸಭೆಯ ಆಸೀನತೆ(Sitting Fee)ಗೆ ರೂ. 3,000-00 (ರೂಪಾಯಿ ಮೂರು ಸಾವಿರ ಮಾತ್ರ)ಗಳನ್ನು ನಿಗದಿಪಡಿಸಿದೆ. ಈ ಸಂಬಂಧ ತಗಲುವ ವೆಚ್ಚವನ್ನು ಸಂಬಂಧಪಟ್ಟ ನಿಗಮಗಳ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.

9. ಕರ್ನಾಟಕ ಸರ್ಕಾರದ ಎಲ್ಲಾ ಸಾರ್ವಜನಿಕ ವಲಯ ಉದ್ಯಮಗಳು ಸಮರ್ಪಕ ಮತ್ತು ಸಮಗ್ರ ಸ್ವರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಬೇಕಾದ ಅಗತ್ಯವಿರುತ್ತದೆ. ಎಲ್ಲಾ ಸಾರ್ವಜನಿಕ ವಲಯ ಉದ್ಯಮಗಳು ತಮ್ಮ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಳ್ಳುವ ಅಥವಾ ಅವುಗಳನ್ನು ಸಮಕಾಲೀಕಗೊಳಿಸಿಕೊಳ್ಳುವ ವಿಷಯದಲ್ಲಿ ಸೂಕ್ತ ಮಾರ್ಗದರ್ಶನ ದೊರೆಯುವುದನ್ನು ಖಚಿತಪಡಿಸುವುದಕ್ಕಾಗಿ ದಿನಾಂಕ 24.10.2016 ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಇ 26 ಎಆರ್‌ಯು 2016 ಅನ್ನು ಹೊರಡಿಸಲಾಗಿದೆ. ಎಲ್ಲಾ ಸಾರ್ವಜನಿಕ ವಲಯ ಉದ್ಯಮಗಳು ತಮ್ಮ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಳ್ಳುವ ಅಥವಾ ಸಮಕಾಲೀಕಗೊಳಿಸಿಕೊಳ್ಳುವ ವಿಷಯದಲ್ಲಿ ಸ್ಥೂಲ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವುದು.

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಸಂಘಟನಾ ನಕ್ಷೆ (ಸಚಿವಾಲಯದಲ್ಲಿ)

**ಸಾರ್ವಜನಿಕ ಉದ್ದಿಮೆಗಳ ಸಚಿವರು**

ಸರ್ಕಾರದ ಕಾರ್ಯದರ್ಶಿ

ಸರ್ಕಾರದ ಉಪ ಕಾರ್ಯದರ್ಶಿ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)

ಶಾಖಾಧಿಕಾರಿ(2) ಮತ್ತು ಶಾಖಾಧಿಕಾರಿ(3)

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ)

ಶಾಖಾಧಿಕಾರಿ(1)

## ಇಲಾಖೆಯ ಪ್ರಗತಿಯ ಪಕ್ಷಿನೋಟ

ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮುಂದುವರೆದ ಯೋಜನೆಯಡಿ ಈ ಕೆಳಕಂಡ ಯೋಜನೆಗಳನು 2020-21ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ:

**ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ತರಬೇತಿ ಕಾರ್ಯಕ್ರಮ:**

2019-20ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ವಿವಿಧ ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಲು ಫೆಬ್ರವರಿ-2020ರ ಅಂತ್ಯದವರೆಗೂ ಒಟ್ಟು 11 ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರ ವರ್ಗವರಿಗೆ ಕಾಲಕಾಲಕ್ಕೆ ತಾಂತ್ರಿಕ, ಆಡಳಿತಾತ್ಮಕ, ಆರ್ಥಿಕ ಹಾಗೂ ಮಾನವ ಸಂಪನ್ಮೂಲ ವಿಷಯಗಳಲ್ಲಿ ಉತ್ತಮದಿಂದ ಅತ್ಯುತ್ತಮದೆಡೆಗೆ ಪರಿಕಲ್ಪನೆಯಲ್ಲಿ ಪ್ರಗತಿ ಸಾಧಿಸಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಮುಗಿಸಲಾಗಿದೆ.

**ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ:**

ಸಾರ್ವಜನಿಕ ಉದ್ದಿಮೆಗಳನ್ನು ಪ್ರೇರೇಪಿಸಲು, ಗುರುತಿಸಲು, ಪ್ರಶಂಸಿಸಲು ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು 2019-20ನೇ ಸಾಲಿನಲ್ಲಿ ಈ ಕೆಳಕಂಡ 05 ಸಾರ್ವಜನಿಕ ಉದ್ದಿಮೆಗಳಿಗೆ ನೀಡಲು ಶಿಫಾರಸ್ಸು/ಆಯ್ಕೆ ಮಾಡಲಾಗಿರುತ್ತದೆ.

| ಕ್ರ.ಸಂ. | ಕ್ಷೇತ್ರದ ವಿವರ | ಪ್ರಶಸ್ತಿಗೆ ಆಯ್ಕೆಯಾದ ಉದ್ದಿಮೆಗಳ ವಿವರ | ಪ್ರಶಸ್ತಿಯ ಮೊತ್ತ |
|---|---|---|---|
| 1 | ಖನಿಜ | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿ. | ರೂ.30.00 ಲಕ್ಷ |
| 2 | ಉತ್ಪಾದನಾ | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | ರೂ.30.00 ಲಕ್ಷ |
| 3 | ವಿದ್ಯುತ್ ಉತ್ಪಾದನಾ ಮತ್ತು ಸರಬರಾಜು | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | ರೂ.30.00 ಲಕ್ಷ |
| 4 | ಮಾರುಕಟ್ಟೆ ಮತ್ತು ವ್ಯಾಪಾರ | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ. | ರೂ.30.00 ಲಕ್ಷ |
| 5 | ಸಾಮಾಜಿಕ | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ. | ರೂ.30.00 ಲಕ್ಷ |
| | ಒಟ್ಟು | - | **ರೂ.150.00 ಲಕ್ಷ** |

ಪ್ರಶಸ್ತಿಯು ನಗದು ಬಹುಮಾನ, ಪ್ರಮಾಣ ಪತ್ರ ಹಾಗೂ ಮೊಮೆಂಟೋವನ್ನು ಹೊಂದಿರುತ್ತದೆ.

**ಸಾರ್ವಜನಿಕ ಉದ್ದಿಮೆಗಳ ಅಧ್ಯಯನ ಮತ್ತು ಮೌಲ್ಯಮಾಪನ:**

ಸಾರ್ವಜನಿಕ ಉದ್ದಿಮೆಗಳು ಬದಲಾಗುತ್ತಿರುವ ಆರ್ಥಿಕ ವಾತಾವರಣವನ್ನು ಎದುರಿಸಲು ಸನ್ನದ್ಧವಾಗಲು ಕೆಲವು ಸುಧಾರಣೆಗಳನ್ನು ತರಬೇಕಾಗುತ್ತದೆ. ಆದಕಾರಣ, ಸಾರ್ವಜನಿಕ ಉದ್ದಿಮೆಗಳು ಲಾಭದಾಯಕವಾಗಿ ಹಾಗೂ ಸ್ವಯಂ-ಸಮರ್ಥನೀಯವಾಗಿ ಕಾರ್ಯನಿರ್ವಹಿಸಲು ತಡೆಯುಂಟು ಮಾಡುತ್ತಿರುವ ಆಳವಾಗಿ ಬೇರೂರಿದ ಪರಿಕಲ್ಪನೆಗಳನ್ನು ಗುರುತಿಸಲು ರಾಜ್ಯ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡಲು ಕ್ರಮ ತೆಗೆದುಕೊಂಡಿದೆ. ಪ್ರಸ್ತುತ ಸಾಲಿನಲ್ಲಿ 10 ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ನಡೆಸಲು ಕ್ರಮವಹಿಸಲಾಗುತ್ತಿದೆ.

# Department of Public Enterprises
## Overview

As a part of its on-going scheme, the Department of Public Enterprises continues to implement the following schemes:

**Training of officers/officials working in State Public Sector Undertakings:**

In 2019-20 about 11 training programmes have been successfully complited till February 2020 to the staff of various State Public Sector Undertakings. Trainings will be imparted in areas like Technical, Administrative, Financial, Human Resources Management, **Good to Great** success stories and other subjects.

**Chief Minister's Ratna Award:**

In order to appreciate, recognize & motivate PSEs to optimise their productivity and services, the following five best performing enterprises were awarded the Annual **Chief Minister's Ratna Award** during 2019-20:

1) Karnataka State Minerals Corporation Ltd.
2) Karnataka Soaps & Detergents Ltd.
3) Mangalore Electricity Supply Company Ltd.
4) Karnataka Women's Development Corporation Ltd
5) Karnataka Silk Industries Corporation Ltd.

This award consists of cash Award, an Appreciation Certificate and a memento.

**Evaluation of Public Sector Enterprises:**

Some improvements have to be brought about in the performance of PSEs to equip them to face the challenges of the changed economic environment. Hence, Government has taken action to evaluate the performance of the PSEs to identify deep rooted concepts detrimental towards functioning of the enterprises for making them profitable and self-sustainable. In 2019-20, steps are being taken to conduct evaluation of 10 PSEs.

## ಸಾರ್ವಜನಿಕ ಉದ್ದಿಮೆಗಳ ಇಲಾಖೆ

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ 2019-20ನೇ ಸಾಲಿನ ಆಯವ್ಯಯ ಪಕ್ಷಿನೋಟ

2019-20ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳಿಗೆ ಈ ವರ್ಷದ ಆಯವ್ಯಯದಲ್ಲಿ 02 ಯೋಜನೆಗಳನ್ನು ಮಂಜೂರು ಮಾಡಲಾಗಿರುತ್ತದೆ.

| ಕ್ರ.ಸಂ | ಯೋಜನೆಯ ಹೆಸರು | ಆಯವ್ಯಯದಲ್ಲಿ ನಿಗದಿಯಾದ ಅನುದಾನ | 31 ಜನವರಿ 2020 ರವರೆಗಿನ ಆರ್ಥಿಕ ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|---|
| 01 | **ಸಾರ್ವಜನಿಕ ಉದ್ದಿಮೆಗಳ ಇಲಾಖೆ**<br>**ಲೆಕ್ಕಶೀರ್ಷಿಕೆ:3451-00-091-0-01-015** | | |
| | 1) ರಾಜ್ಯಮಟ್ಟದ ಸಾರ್ವಜನಿಕ 10 ಉದ್ದಿಮೆಗಳ ಮೌಲ್ಯಮಾಪನ ಅಧ್ಯಯನ ಕಾರ್ಯಕ್ರಮ | 30.00 | 0.00 |
| | 2) ಸಾರ್ವಜನಿಕ ಉದ್ದಿಮೆಗಳಿಗೆ ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಐದು ಪ್ರಶಸ್ತಿಗಳು | 150.00 | 0.00 |
| | 3) ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿಗೆ ಸಂಬಂಧಿಸಿದ ಆಡಳಿತ ವೆಚ್ಚ | 10.00 | 0.00 |
| | **ಒಟ್ಟು ರೂಪಾಯಿಗಳು** | **190.00** | **0.00** |
| 2 | ಡಿಸ್ -ಇನ್ವೆಸ್ಟ್‌ಮೆಂಟ್ ಅಂಡ್ ಕ್ಯಾಪಿಟಲ್ ಪಬ್ಲಿಕ್ ಎಂಟರ್‌ಪ್ರೈಸಸ್ ರಿಫಾರ್ಮ್ಸ್(ಬಂಡವಾಳ ಹಿಂತೆಗೆಯುವಿಕೆ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣೆ)<br>**ಲೆಕ್ಕ ಶೀರ್ಷಿಕೆ:3451-00-091-0-02-059** | | |
| | 1. ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳು | 110.00 | 74.69 |
| | | **110.00** | **74.69** |

**ಸಾರ್ವಜನಿಕ ಉದ್ದಿಮೆಗಳ ಇಲಾಖೆ:**

ಸಾರ್ವಜನಿಕ ಉದ್ದಿಮೆಗಳು ಬದಲಾಗುತ್ತಿರುವ ಆರ್ಥಿಕ ವಾತಾವರಣವನ್ನು ಎದುರಿಸಲು ಸನ್ನದ್ಧವಾಗಲು ಕೆಲವು ಸುಧಾರಣೆಗಳನ್ನು ತರಬೇಕಾಗುತ್ತದೆ. ಆದಕಾರಣ, ಸಾರ್ವಜನಿಕ ಉದ್ದಿಮೆಗಳು ಲಾಭದಾಯಕವಾಗಿ ಹಾಗೂ ಸ್ವಯಂ ಸಮರ್ಥನೀಯವಾಗಿ ಕಾರ್ಯನಿರ್ವಹಿಸಲು ತಡೆಯುಂಟು ಮಾಡುತ್ತಿರುವ ಆಳವಾಗಿ ಬೇರೂರಿದ ಪರಿಕಲ್ಪನೆಗಳನ್ನು ಗುರುತಿಸಲು ರಾಜ್ಯ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡಲು ಕ್ರಮ ತೆಗೆದುಕೊಂಡಿದೆ. ಪ್ರಸ್ತುತ ಸಾಲಿನಲ್ಲಿ 10 ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ನಡೆಸಲು ಕ್ರಮವಹಿಸಲಾಗುತ್ತಿದೆ.

**ಬಂಡವಾಳ ಹಿಂತೆಗೆಯುವಿಕೆ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣೆ**

ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರ ವರ್ಗದವರಿಗೆ ಕಾಲಕಾಲಕ್ಕೆ ತಾಂತ್ರಿಕ ಆಡಳಿತಾತ್ಮಕ, ಆರ್ಥಿಕ, ಮಾನವ ಸಂಪನ್ಮೂಲ ವಿಷಯಗಳಲ್ಲಿ ಉತ್ತಮದಿಂದ ಅತ್ಯುತ್ತಮದೆಡೆಗೆ ಪರಿಕಲ್ಪನೆಯಲ್ಲಿ ಪ್ರಗತಿ ಸಾಧಿಸಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನಿಯೋಜಿಸಲಾಗಿದೆ. 2019-20ನೇ ಸಾಲಿನಲ್ಲಿ ಒಟ್ಟಾರೆ ಸುಮಾರು 356 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ಸದರಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಹಂಚಿಕೆಯಾದ ರೂ.110.00 ಲಕ್ಷ ಆಯವ್ಯಯದಲ್ಲಿ ರೂ.74.69 ಲಕ್ಷಗಳನ್ನು ಜನವರಿ 2020 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿದೆ.

**2019-20ನೇ ಸಾಲಿನ ವೆಚ್ಚಗಳ ವಿವರ**

**ಸಾರ್ವಜನಿಕ ಉದ್ದಿಮೆಗಳ ಇಲಾಖೆ:**

ಈ ಯೋಜನೆಗಳಿಗೆ ನಿಗದಿಪಡಿಸಲಾದ ರೂ.190.00 ಲಕ್ಷಗಳ ಅನುದಾನದಲ್ಲಿ ರೂ.150.00 ಲಕ್ಷಗಳನ್ನು ಉಪಯೋಗಿಸಲಾಗಿದೆ.

ಸಾರ್ವಜನಿಕ ಉದ್ದಿಮೆಗಳನ್ನು ಪ್ರೇರೇಪಿಸಲು, ಗುರುತಿಸಲು, ಪ್ರಶಂಸಿಸಲು 2019-20ನೇ ಸಾಲಿನಲ್ಲಿ ಆಯ್ದ 05 ಸಾರ್ವಜನಿಕ ಉದ್ದಿಮೆಗಳಿಗೆ ಮಾನ್ಯ ಮುಖ್ಯಮಂತ್ರಿಯಗಳ ವಾರ್ಷಿಕ ರತ್ನ ಪ್ರಶಸ್ತಿಯನ್ನು ನೀಡಲಾಗಿದೆ. ಈ ಪ್ರಶಸ್ತಿಯು ನಗದು ಬಹುಮಾನ, ಪ್ರಶಸ್ತಿ ಪಮಾಣ ಪತ್ರ ಹಾಗೂ ಮೊಮೆಂಟೋವನ್ನು ಒಳಗೊಂಡಿರುತ್ತದೆ.

ಸಾರ್ವಜನಿಕ ಉದ್ದಿಮೆಗಳು ಬದಲಾಗುತ್ತಿರುವ ಆರ್ಥಿಕ ವಾತಾವರಣವನ್ನು ಎದುರಿಸಲು ಸನ್ನದ್ಧವಾಗಲು ಕೆಲವು ಸುಧಾರಣೆಗಳನ್ನು ತರಬೇಕಾಗುತ್ತದೆ. ಆದಕಾರಣ, ಸಾರ್ವಜನಿಕ ಉದ್ದಿಮೆಗಳು ಲಾಭದಾಯಕವಾಗಿ ಹಾಗೂ ಸ್ವಯಂ-ಸಮರ್ಥನೀಯವಾಗಿ ಕಾರ್ಯನಿರ್ವಹಿಸಲು ತಡೆಯುಂಟು ಮಾಡುತ್ತಿರುವ ಆಳವಾಗಿ ಬೇರೂರಿದ ಪರಿಕಲ್ಪನೆಗಳನ್ನು ಗುರುತಿಸಲು ರಾಜ್ಯ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡಲು ಕ್ರಮ ತೆಗೆದುಕೊಂಡಿದೆ. ಪ್ರಸ್ತುತ ಸಾಲಿನಲ್ಲಿ 10 ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ನಡೆಸಲು ಕ್ರಮವಹಿಸಲಾಗುತ್ತಿದೆ.

**ಬಂಡವಾಳ ಹಿಂತೆಗೆಯುವಿಕೆ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣೆ:**

ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ನೌಕರ ವರ್ಗದವರಿಗೆ ಕಾಲ ಕಾಲಕ್ಕೆ ತಾಂತ್ರಿಕ, ಆಡಳಿತಾತ್ಮಕ, ಆರ್ಥಿಕ ಹಾಗೂ ಮಾನವ ಸಂಪನ್ಮೂಲ ವಿಷಯಗಳಲ್ಲಿ ಉತ್ತಮದಿಂದ ಅತ್ಯುತ್ತಮದೆಡೆಗೆ ಪರಿಕಲ್ಪನೆಯಲ್ಲಿ ಪ್ರಗತಿ ಸಾಧಿಸಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2019-20ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ವಿವಿಧ ಸಾರ್ವಜನಿಕ ಉದ್ದಿಮೆಗಳ ಒಟ್ಟಾರೆ ಸುಮಾರು 356 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಲು ನವೆಂಬರ್-2019ರ ಅಂತ್ಯದವರೆಗೂ ಒಟ್ಟು 11 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತರಬೇತಿ ನೀಡಲಾಗಿದೆ. ಹಂಚಿಕೆಯಾದ ರೂ.110.00 ಲಕ್ಷ ಆಯವ್ಯಯದಲ್ಲಿ ರೂ.74.69 ಲಕ್ಷಗಳನ್ನು ಜನವರಿ 2020 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿದೆ.

**2019-20ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಹಂಚಿಕೆಯಾಗಿರುವ ಅನುದಾನದ ಭೌತಿಕ ಮತ್ತು ಆರ್ಥಿಕ ಪ್ರಗತಿಗಳ ಮಾಹಿತಿ**

| ಕ್ರ.ಸಂ | ವಿವರ | ಮಂಜೂರಾದ ಅನುದಾನ(ರೂ ಲಕ್ಷಗಳಲ್ಲಿ) | 31 ಜನವರಿ 2020ರ ವರೆಗಿನ ಪ್ರಗತಿ | |
|---|---|---|---|---|
| | | | ಭೌತಿಕ | ಆರ್ಥಿಕ |
| **ಲೆಕ್ಕ ಶೀರ್ಷಿಕೆ ಸಂಖ್ಯೆ:3451-00-091-0-01-015** | | | | |
| 1 | ಮೌಲ್ಯಮಾಪನ ಕಾರ್ಯಕ್ಕೆ | 30.00 | - | 0.00 |
| 2 | ವಾರ್ಷಿಕ ರತ್ನ ಪ್ರಶಸ್ತಿ ನೀಡಲು (30x5) | 150.00 | - | 0.00 |
| 3 | ವಾರ್ಷಿಕ ರತ್ನ ಪ್ರಶಸ್ತಿಗೆ ಸಂಬಂಧಪಟ್ಟಂತೆ ಆಡಳಿತ ವೆಚ್ಚ | 10.00 | | |
| | **ಒಟ್ಟು** | **190.00** | | |
| **ಲೆಕ್ಕ ಶೀರ್ಷಿಕೆ ಸಂಖ್ಯೆ:3451-00-091-0-02-059** | | | | |
| 1 | ನಿಗಮ/ಮಂಡಳಿಗಳಲ್ಲಿನ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ತರಬೇತಿ ಕಾರ್ಯಕ್ರಮ | 110.00 | 11 | 74.69 |
| | **ಒಟ್ಟು** | 110.00 | | 74.69 |
| | **ಒಟ್ಟಾರೆ ಮೊತ್ತ** | **300.00** | | **74.69** |

## ಸಾರ್ವಜನಿಕ ಉದ್ದಿಮೆಗಳ ವ್ಯಾಪ್ತಿಯಲ್ಲಿ ಬರುವ 60 ಸಾರ್ವಜನಿಕ ಉದ್ದಿಮೆಗಳ ಕುರಿತು ಮಾಹಿತಿ

**ಲಾಭದಲ್ಲಿರುವ ಸಾರ್ವಜನಿಕ ಉದ್ದಿಮೆಗಳು:**

| ಕ್ರ.ಸಂ | ಸಾರ್ವಜನಿಕ ಉದ್ದಿಮೆಯ ಹೆಸರು |
|---|---|
| 1. | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ |
| 2. | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ |
| 3. | ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ |
| 4. | ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ |
| 5. | ಮೈಸೂರ್ ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ |
| 6. | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ |
| 7. | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ |
| 8. | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ನಿಯಮಿತ |
| 9. | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| 10. | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ |
| 11. | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ |
| 12. | ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ ಲಿಮಿಟೆಡ್) |
| 13. | ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ |
| 14. | ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ |
| 15. | ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜನ್ಸೀಸ್ ಲಿಮಿಟೆಡ್ |
| 16. | ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ |
| 17. | ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ |
| 18. | ಕಾವೇರಿ ನೀರಾವರಿ ನಿಗಮ ನಿಯಮಿತ |
| 19. | ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ |
| 20. | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ |
| 21. | ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ |
| 22. | ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ |
| 23. | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ |
| 24. | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ |
| 25. | ಕರ್ನಾಟಕ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ |
| 26. | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ |
| 27. | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ |

| | |
|---|---|
| 28. | ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ |
| 29. | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ |
| 30. | ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ |
| 31. | ಕರ್ನಾಟಕ ರಾಜ್ಯ ಉಗ್ರಾಣ ನಿಗಮ |
| 32. | ಕಂಠೀರವ ಸ್ಟುಡಿಯೋ ನಿಯಮಿತ |
| 33. | ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ |
| 34. | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ |
| 35. | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ |
| 36. | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ |

**ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳು:**

| ಕ್ರ.ಸಂ | ಸಾರ್ವಜನಿಕ ಉದ್ದಿಮೆಯ ಹೆಸರು |
|---|---|
| 1. | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| 2. | ಬೆಂಗಳೂರು ಮಹಾನಗರ ಸಾರಿಗೆ ನಿಗಮ |
| 3. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ |
| 4. | ಕರ್ನಾಟಕ ನೀರಾವರಿ ನಿಗಮ ನಿಯಮಿತ |
| 5. | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ |
| 6. | ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ |
| 7. | ಮೈಸೂರು ಕಾಗದ ಕಾರ್ಖಾನೆ ನಿಯಮಿತ |
| 8. | ಮೈಸೂರು ಸಕ್ಕರೆ ಕಾರ್ಖಾನೆ ಕಂಪನಿ ನಿಯಮಿತ |
| 9. | ಎನ್‌ಜಿಇಎಫ್ (ಹುಬ್ಬಳ್ಳಿ) ನಿಯಮಿತ |
| 10. | ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ |
| 11. | ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ |
| 12. | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ |
| 13. | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ |
| 14. | ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) |
| 15. | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ |
| 16. | ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ದಿ ನಿಗಮ ನಿಯಮಿತ |
| 17. | ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ |
| 18. | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ |
| 19. | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ |

**ಸೇವಾ ಕ್ಷೇತ್ರದ ಉದ್ದಿಮೆಗಳು**

| ಕ್ರ.ಸಂ | ಸಾರ್ವಜನಿಕ ಉದ್ದಿಮೆಯ ಹೆಸರು |
|---|---|
| 1 | ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ |
| 2 | ಡಿ. ದೇವರಾಜ ಅರಸು ಹಿಂದುಳಿದವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ |
| 3 | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ |
| 4 | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ |
| 5 | ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ |

## INFORMATION OF 60 PUBLIC SECTOR ENTERPRISES WITHIN THE PURVIEW OF DEPARTMENT OF PUBLIC ENTERPRISES

### PROFIT MAKING PUBLIC SECTOR ENTERPRISES:

| Sl.No. | PSEs |
|---|---|
| 1 | Karnataka Silk Industries Corporation Ltd. |
| 2 | Karnataka Soaps & Detergents Ltd. |
| 3 | Karnataka Vidyuth Karkhane Ltd. |
| 4 | Mysore Electrical Industries Ltd. |
| 5 | Mysore Paints and Varnish Ltd. |
| 6 | Karnataka State Financial Corporation Ltd. |
| 7 | Hutti Gold Mines Company Ltd. |
| 8 | Karnataka State Minerals Corporation Ltd. |
| 9 | Bangalore Electricity Supply Company Ltd. |
| 10 | Karnataka Power Corporation Ltd. |
| 11 | Karnataka Power Transmission Corporation Ltd |
| 12 | Mangalore Electricity Supply Company Ltd. |
| 13 | D. Devraj Urs Truck Terminals Ltd. |
| 14 | Karnataka State Beverages Corporation Ltd. |
| 15 | Marketing Consultants & Agencies Ltd |
| 16 | Mysore Sales International Ltd |
| 17 | Jungle Lodges and Resorts Ltd. |
| 18 | Cauveri Neeravari Nigam Ltd. |
| 19 | Karnataka Rural Infrastructure Development Ltd. |
| 20 | Karnataka State Small Industries Development Corporation Ltd. |
| 21 | Karnataka Cashew Development Corporation Ltd. |
| 22 | Karnataka Food and Civil Supplies Corporation Ltd. |
| 23 | Karnataka State Agricultural Produce Processing & Export Corporation Ltd. |
| 24 | Karnataka State Seeds Corporation. Ltd. |

| | |
|---|---|
| 25 | Karnataka State Pulses Abhivrudhi Mandali Ltd. |
| 26 | Karnataka Forest Development Corporation Ltd. |
| 27 | Karnataka State Forest Industries Corporation Ltd. |
| 28 | Karnataka Fisheries Development Corporation Ltd. |
| 29 | Karnataka State Handicrafts Development Corporation Ltd. |
| 30 | Karnataka State Textile Infrastructure Development Corporation Ltd. |
| 31 | Karnataka State Warehousing Corporation Ltd. |
| 32 | Shree Kanteerava Studios Ltd. |
| 33 | Karnataka Police Housing Corporation Ltd. |
| 34 | Karnataka Electronics Development Corporation. Ltd. |
| 35 | Chamundeswari Electricity Supply Company Ltd. |
| 36 | Karnataka State Tourism Development Corporation Ltd. |

**PUBLIC SECTOR ENTERPRISES UNDER LOSS:**

| Sl.No. | PSEs |
|---|---|
| 1 | Hubli Electricity Supply Company Ltd. |
| 2 | Bangalore Metropolitan Transport Corporation Ltd. |
| 3 | Karnataka State Road Transport Corporation Ltd. |
| 4 | Karnataka Neeravari Nigam Ltd. |
| 5 | Karnataka Road Development Corporation Ltd. |
| 6 | Karnataka Compost Development Corporation Ltd. |
| 7 | Mysore Paper Mills Ltd. |
| 8 | Mysore Sugar Company Ltd. |
| 9 | N.G.E.F.(Hubli)Ltd. |
| 10 | Gulbarga Electricity Supply Company Ltd. |
| 11 | North East Karnataka Road Transport Corporation |
| 12 | North West Karnataka Road Transport Corporation Ltd. |
| 13 | Krishna Bhagya Jala Nigama Ltd. |
| 14 | Dr. Babu Jagjeevan Ram Leather Industries Development Corporation Ltd. (LIDKAR) |
| 15 | Karnataka Handloom Development Corporation Ltd. |
| 16 | Karnataka State Coir Development Corporation Ltd. |
| 17 | Karnataka State Industrial & Infrastructure Development Corporation Ltd. |
| 18 | Rajiv Gandhi Rural Housing Corporation Ltd. |
| 19 | Karnataka Sheep & Wool Development Corporation Ltd. |

**SOCIAL SECTOR ENTERPRISES:**

| Sl.No. | PSEs |
|---|---|
| 1 | Dr. B.R. Ambedkar Development Corporation Ltd. |
| 2 | D. Devraj Urs Backward Classes Development Corporation Ltd. |
| 3 | Maharshi Valmiki Scheduled Tribe Development Corporation Ltd. |
| 4 | Karnataka Women's Development Corporation Ltd |
| 5 | Karnataka Minorities Development Corporation Ltd. |

ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮುಂದುವರೆದ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು 2020-21ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ.

**ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ತರಬೇತಿ ಕಾರ್ಯಕ್ರಮ**

2020-21ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವಿವಿಧ ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ ಹಾಗೂ ನೌಕರ ವರ್ಗದವರಿಗೆ ಕಾಲ ಕಾಲಕ್ಕೆ ತಾಂತ್ರಿಕ, ಆಡಳಿತಾತ್ಮಕ, ಆರ್ಥಿಕ, ಮಾನವ ಸಂಪನ್ಮೂಲ ವಿಷಯಗಳಲ್ಲಿ **ಉತ್ತಮದಿಂದ ಅತ್ಯುತ್ತಮದೆಡೆಗೆ** ಪರಿಕಲ್ಪನೆಯಲ್ಲಿ ಪ್ರಗತಿ ಸಾಧಿಸಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನಿಯೋಜಿಸಲಾಗುತ್ತದೆ.

**ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ:**

ಸಾರ್ವಜನಿಕ ಉದ್ದಿಮೆಗಳನ್ನು ಪ್ರೇರೇಪಿಸಲು, ಗುರುತಿಸಲು, ಪ್ರಶಂಸಿಸಲು ಆಯ್ದ ಸಾರ್ವಜನಿಕ ಉದ್ದಿಮೆಗಳಿಗೆ **ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ**ಯನ್ನು 2020-21ನೇ ಸಾಲಿನಲ್ಲಿ ನೀಡಲಾಗುವುದು. ಈ ಪ್ರಶಸ್ತಿಯು ನಗದು ಬಹುಮಾನ ಹಾಗೂ ಪ್ರಶಸ್ತಿ/ಪ್ರಮಾಣ ಪತ್ರವನ್ನು ಹೊಂದಿರುತ್ತದೆ. ಇದರಿಂದ ಉದ್ದಿಮೆಗಳು ಹೆಚ್ಚಿನ ಪ್ರಗತಿ ಸಾಧಿಸಲು ಪ್ರೋತ್ಸಾಹದಾಯಕವಾಗಿರುತ್ತದೆ.

**ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ:**

ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ರಾಜ್ಯದಲ್ಲಿರುವ 60 ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆ, ಅಭಿವೃದ್ಧಿ ಮತ್ತು ಪ್ರಗತಿ ಪರಿಶೀಲನೆಯನ್ನು ಆಗಿಂದಾಗ್ಗೆ ಪರಿಶೀಲನೆ ಮಾಡುತ್ತಿದೆ. ಸಾರ್ವಜನಿಕ ಉದ್ದಿಮೆಗಳು ಲಾಭಾಂಶ ಗಳಿಸುವುದರ ಮೂಲಕ ಕಾಲಕಾಲಕ್ಕೆ ಪ್ರಗತಿ ಸಾಧಿಸಲು ಉತ್ತೇಜನ ನೀಡುತ್ತಿದೆ. ಪ್ರತಿವರ್ಷ ಕೆಲವು ಆಯ್ದ ಸಾರ್ವಜನಿಕ ಉದ್ದಿಮೆಗಳ ಅಧ್ಯಯನ ಮತ್ತು ಮೌಲ್ಯಮಾಪನವನ್ನು ಕೈಗೊಳ್ಳಲಾಗುತ್ತಿದೆ.

As a part of its on-going scheme, the Department of Public Enterprises continues to implement the following schemes:

**Training of officers/officials working in State Public Sector Undertakings:**

Training programme will be conducted during 2020-21 the officers/officials working in various State Public Sector Undertakings, Trainings will be imparted in areas like Technical, Administrative, Financial, Human Resources Management, Good to Great success stories and other subjects.

**Chief Minister's Ratna Award:**

In order ot appreciate, recognize & motivate, the best performing enterprises will be given the Annual Chief Minister's Ratna Award during 2020-21. This award consists cash Award and an Appreciation Certificate. This will motivate the Public Sector Enterprises to further improve their performance.

**Evaluation of PSUs:**

The Department of Public Enterprises carries out Evaluation studies of State Public Sector Enterprises for assessing their performance, development and overall progress. In addition to profit making the studies are aimed at healthy growth of the enterprises form time to time. Every year evaluation of certain selected Public Sector Enterprises are being taken up.

## <u>ಸಾರ್ವಜನಿಕ ಉದ್ದಿಮೆಗಳ ಇಲಾಖೆಯ 2020-21ನೇ ಸಾಲಿನ ಬೇಡಿಕೆ ವಿವರ</u>

| ಕ್ರ.ಸಂ | ಯೋಜನೆ, ಲೆಕ್ಕಶೀರ್ಷಿಕೆ ಮತ್ತು ಕಾಂಪೊನೆಂಟ್ಸ್‌ಗಳು | ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ 2020-21 | ಆಯವ್ಯಯ(ರೂ. ಲಕ್ಷಗಳಲ್ಲಿ) | |
|---|---|---|---|---|
| | | | **ಆರ್ಥಿಕ** | **ಭೌತಿಕ** |
| ಅ) | ಸಾರ್ವಜನಿಕ ಉದ್ದಿಮೆಗಳ ಇಲಾಖೆ **ಲೆಕ್ಕಶೀರ್ಷಿಕೆ:3451-00-091-0-01-015** 1) ರಾಜ್ಯಮಟ್ಟದ ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ಅಧ್ಯಯನ ಕಾರ್ಯಕ್ರಮ | ಉದ್ದಿಮೆಗಳ ಮೌಲ್ಯಮಾಪನ | 30.00 | ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನಕ್ಕಾಗಿ |
| ಆ) | 2) ಸಾರ್ವಜನಿಕ ಉದ್ದಿಮೆಗಳಿಗೆ ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿಗಳು | ಪ್ರಶಸ್ತಿಗಳು | 150.00 | ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಸಾರ್ವಜನಿಕ ಉದ್ದಿಮೆಗಳಿಗೆ ರಾಜ್ಯಮಟ್ಟದ ಪ್ರಶಸ್ತಿ |
| ಇ) | 3) ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿಗೆ ಸಂಬಂಧಿಸಿದ ಆಡಳಿತ ವೆಚ್ಚ | | 10.00 | |
| | **ಒಟ್ಟು** | | **190.00** | |
| ಆ) | **ಬಂಡವಾಳ ಹಿಂತೆಗೆಯುವಿಕೆ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ:3451-00-091-0-02-059** ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳು | | 110.00 | ಸಾರ್ವಜನಿಕ ಉದ್ದಿಮೆಗಳ ಎಲ್ಲಾ ವರ್ಗದ ನೌಕರರು/ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು |
| | **ಒಟ್ಟು** | | **110.00** | |
| | **ಒಟ್ಟಾರೆ ಮೊತ್ತ** | | **300.00** | |